# ಮಂದಾನ ಮಂದಾರ




**ದಕ್ಷಿಣ ಆಫ್ರಿಕಾ ವಿರುದ್ಧದ ಇತ್ತೀಚಿನ ಏಕದಿನ ಪಂದ್ಯಗಳ ಸರಣಿಯಲ್ಲಿ ಸ್ಮೃತಿ ಮಂದಾನ ಸತತ ಎರಡು ಶತಕ ಮತ್ತು ಮತ್ತೊಂದು ಪಂದ್ಯದಲ್ಲಿ 90 ರನ್ ಬಾರಿಸಿದ್ದರು. ಏಕದಿನ ಕ್ರಿಕೆಟ್‌ನಲ್ಲಿ ಸತತ ಎರಡು ಪಂದ್ಯಗಳಲ್ಲಿ ಶತಕ ಬಾರಿಸಿದ ಭಾರತದ ಮೊದಲ ಆಟಗಾರ್ತಿ ಎನ್ನುವ ಹೆಗ್ಗಳಿಕೆ ಅವರದು.**

**ಪ್ರಮೋದ**

'ಸದಾ ಅತ್ಯುತ್ತಮವಾದದ್ದನ್ನು ನೀಡುತ್ತಲೇ ಇರಿ ಮತ್ತು ಹೊಸ ಎತ್ತರಗಳನ್ನು ಏರುತ್ತಲೇ ಇರಿ'

ಭಾರತದ ಮಹಿಳಾ ಕ್ರಿಕೆಟ್‌ನ ಕಣ್ಮಣಿ ಸ್ಮೃತಿ ಮಂದಾನ ಮೂರು ವರ್ಷಗಳ ಹಿಂದೆ 'ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್' (ಐಸಿಸಿ) ನೀಡುವ ಪ್ರತಿಷ್ಠಿತ ವರ್ಷದ ಶ್ರೇಷ್ಠ ಆಟಗಾರ್ತಿ ಗೌರವಕ್ಕೆ ಭಾಜನರಾದಾಗ ದಿಗ್ಗಜ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಮಾಡಿದ್ದ ಟ್ವೀಟ್ ಇದು.

ಸ್ಮೃತಿ 2018ರಲ್ಲಿಯೂ ಐಸಿಸಿಯಿಂದ ಈ ಪ್ರಶಸ್ತಿ ಪಡೆದುಕೊಂಡಿದ್ದರು. ಅದೇ ವರ್ಷ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವತಿಯಿಂದಲೂ ವರ್ಷದ ಏಕದಿನ ಮಾದರಿಯ ಶ್ರೇಷ್ಠ ಆಟಗಾರ್ತಿ ಗೌರವ ಲಭಿಸಿತ್ತು. ಐಸಿಸಿಯಿಂದ ಎರಡು ಬಾರಿ ಉತ್ಕೃಷ್ಟ ಗೌರವ ಪಡೆದ ಭಾರತದ ಏಕೈಕ ಆಟಗಾರ್ತಿ ಎನಿಸಿದ್ದಾರೆ. 2007ರಲ್ಲಿ ಜೂಲನ್ ಗೋಸ್ವಾಮಿ ಮಾತ್ರ ಒಂದು ಸಲ ಐಸಿಸಿ ವರ್ಷದ ಆಟಗಾರ್ತಿ ಶ್ರೇಯಕ್ಕೆ ಭಾಜನರಾಗಿದ್ದರು.

ಕ್ರಿಕೆಟ್‌ನಲ್ಲಿ ದೊಡ್ಡ ಸಾಧನೆಯ ಕನಸು ಹೊತ್ತ ಕೋಟ್ಯಂತರ ಮನಸ್ಸುಗಳಿಗೆ ಸ್ಮೃತಿ ಮಂದಾನ ಬದುಕು ಹಾಗೂ ಕ್ರಿಕೆಟ್‌ನಲ್ಲಿನ ಸಾಧನೆ ಪ್ರೇರಣೆಯ ಕಥನವಾಗಿದೆ. ಇದಕ್ಕೆ ಕಾರಣ, ಅವರು ಏಕದಿನ, ಟೆಸ್ಟ್ ಮತ್ತು ಟಿ–20ಯಲ್ಲಿ ಹರಿಸುತ್ತಿರುವ ರನ್ ಹೊಳೆ. ಬಾಲ್ಯದಿಂದ ಗಲ್ಲಿ ಕ್ರಿಕೆಟ್ ಆಡುವ ಮೂಲಕ ತಮ್ಮ ಸಾಧನೆಯ ಕ್ಷೇತ್ರವನ್ನು ಗುರುತಿಸಿಕೊಂಡಿದ್ದ ಸ್ಮೃತಿ ಮಂದಾನಗೆ ಸಹೋದರನೇ ಜೊತೆಗಾರ.

ಮನೆಯ ಅಂಗಳದಲ್ಲಿ, ಓಣಿಯಲ್ಲಿ ಅಣ್ಣನ ಜೊತೆ ಕಲಿಯುತ್ತ ಕ್ರಿಕೆಟ್ ಆಡುವುದನ್ನು ರೂಢಿಸಿಕೊಂಡ ಸ್ಮೃತಿ ಮಂದಾನ ಭವಿಷ್ಯದಲ್ಲಿ ಮುಂದುವರಿಸಿಕೊಂಡು ಬಂದ ಬಾಲ್ಯದ ಕ್ರಿಕೆಟ್ ಪ್ರೀತಿ ಈಗ ಕೋಟ್ಯಂತರ ಜನರ ಕಣ್ಮಣಿಯನ್ನಾಗಿಸಿದೆ. ಆರು ಟೆಸ್ಟ್‌ಗಳಿಂದ 480 ರನ್, 85 ಏಕದಿನ ಪಂದ್ಯಗಳಿಂದ 3,585 ರನ್ ಮತ್ತು 133 ಟಿ–20 ಪಂದ್ಯಗಳಿಂದ 3,220 ರನ್‌ಗಳನ್ನು ಗಳಿಸಿದ್ದಾರೆ.

ಎಡಗೈ ಬ್ಯಾಟಿಂಗ್ ಮತ್ತು ಬಲಗೈ ಮಧ್ಯಮ ಕ್ರಮಾಂಕದ ಸಾಂದರ್ಭಿಕ ಬೌಲರ್ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಮಹಾರಾಷ್ಟ್ರ ತಂಡ, ಭಾರತ, ಇಂಡಿಯಾ ಗ್ರೀನ್, ಐಪಿಎಲ್‌ನಲ್ಲಿ ಆರ್‌ಸಿಬಿ, ವಿದೇಶ ಲೀಗ್‌ಗಳಲ್ಲಿ ಬ್ರಿಸ್ಬೇನ್ ಹೀಟ್, ಸದರ್ನ್ ಬ್ರಾವ್, ಸಿಡ್ನಿ ಥಂಡರ್ ಹೀಗೆ ಅನೇಕ ಟೂರ್ನಿಗಳಲ್ಲಿ ಸ್ಮೃತಿ ಆಡಿದ್ದಾರೆ. ಜುಲೈ 17ಕ್ಕೆ 28ನೇ ವಸಂತಕ್ಕೆ ಕಾಲಿಡಲಿರುವ ಅವರು ಟಿ–20 ಮತ್ತು ಏಕದಿನ ಅಂತರರಾಷ್ಟ್ರೀಯ ಪಂದ್ಯಗಳಿಗೆ ಪದಾರ್ಪಣೆ ಮಾಡಿ ಹತ್ತು ವರ್ಷಗಳು ಪೂರ್ಣಗೊಂಡಿವೆ. ಇದೇ ವರ್ಷದ ಆಗಸ್ಟ್ 13ಕ್ಕೆ ಚೊಚ್ಚಲ ಟೆಸ್ಟ್ ಆಡಿ ದಶಕವಾಗಲಿದೆ. ಈ ಅವಧಿಯಲ್ಲಿ ಸ್ಮೃತಿ ಮಂದಾನ ಅನೇಕ ದಾಖಲೆಗಳನ್ನು ಮಾಡಿದ್ದು, ಹಿಂದಿನ ಹಲವು ದಾಖಲೆಗಳನ್ನು ಪುಡಿಗಟ್ಟಿದ್ದಾರೆ.

ಚುರುಕಿನ ಓಟ, ಬಿರುಸಾಗಿ ಬಾರಿಸುವ ಬೌಂಡರಿ, ಸಿಕ್ಸರ್‌ಗಳ ಆಟ, ದೃಢ ನಿರ್ಧಾರ ಕೈಗೊಳ್ಳುವ ಛಾತಿ, ಕ್ರಿಕೆಟ್ ಅಂಗಳದಾಚೆಗೂ ಎಲ್ಲರನ್ನೂ ಸೆಳೆಯುವ ಸೌಂದರ್ಯ ಸ್ಮೃತಿ ಆಟಕ್ಕೆ ಇಂಬು ನೀಡಿವೆ. ಸ್ಮೃತಿ ವಿವಿಧ ವಯೋಮಿತಿಯೊಳಗಿನ ಕ್ರಿಕೆಟ್ ಟೂರ್ನಿಗಳಲ್ಲಿ ಹರಿಸಿದ ರನ್ ಹೊಳೆ ಅವರಿಗೆ ಈಗ ಉತ್ತಮ ಸ್ಥಾನಮಾನ ತಂದುಕೊಟ್ಟಿವೆ.

ಸ್ಮಿತಾ ಹಾಗೂ ಶ್ರೀನಿವಾಸ ಮಂದಾನ ದಂಪತಿಯ ಪುತ್ರಿ ಸ್ಮೃತಿ ಓದಿದ್ದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ. ಶ್ರೀನಿವಾಸ ಜಿಲ್ಲಾಮಟ್ಟದ ಕ್ರಿಕೆಟ್ ಆಟಗಾರರಾಗಿದ್ದರು. ಸ್ಮೃತಿ ಸಹೋದರ ಶ್ರವಣ್ ಬ್ಯಾಂಕ್ ವ್ಯವಸ್ಥಾಪಕರಾಗಿದ್ದು ಮಹಾರಾಷ್ಟ್ರದ 16 ವರ್ಷದ ಒಳಗಿನವರ ಟೂರ್ನಿಯ ಪಂದ್ಯಗಳಲ್ಲಿ ಆಡಿದ್ದಾರೆ. ಆಗಿನ್ನು ಒಂಬತ್ತು ವರ್ಷದವಳಾಗಿದ್ದ